## ಕಲಾವಿದರಲ್ಲೇ ಗೊಂದಲ ಏಕೆ?

ಕಲರ್ಸ್ ಸೂಪರ್ ವಾಹಿನಿಯಲ್ಲಿ ಟಿ.ಎನ್. ಸೀತಾರಾಂ ನಿರ್ದೇಶನದ 'ಮಗಳು ಜಾನಕಿ' ತುಂಬ ಚೆನ್ನಾಗಿ ಪ್ರಸಾರವಾಗುತ್ತಿದೆ. ಎಲ್ಲ ಪಾತ್ರಧಾರಿಗಳು ಅತ್ಯಂತ ಸೊಗಸಾಗಿ ಪಾತ್ರಗಳಿಗೆ ಜೀವ ತುಂಬುತ್ತಿದ್ದಾರೆ. ಆದರೂ ಕೆಲವೊಂದು ಗೊಂದಲಗಳು ಧಾರಾವಾಹಿಯ ಕಲಾವಿದರಲ್ಲೇ ಇದ್ದಂತಿದೆ.

ಕಳೆದ ವಾರ ಒಂದು ಸಂಚಿಕೆಯಲ್ಲಿ ನಿರಂಜನ ಮದುವೆ ಗೊತ್ತಾಗಿದೆ ಎಂದು ಸಿಹಿತಿಂಡಿಯನ್ನು ಸಿಎಸ್‌ಪಿ ತಂಗಿ ಶ್ಯಾಮಲಾ ಮನೆಗೆ ತೆಗೆದುಕೊಂಡು ಹೋಗುತ್ತಾನೆ. ಆಗ ಶ್ಯಾಮಲಾ ಸಿಹಿತಿಂಡಿ ಪೊಟ್ಟಣ ನೋಡಿ 'ಓಹ್ ಧಾರವಾಡ ಪೇಡ; ನಂಗೆ ತುಂಬ ಇಷ್ಟ' ಎನ್ನುತ್ತಾರೆ. ಆಗ ನಿರಂಜನ 'ಇದು ಧಾರವಾಡ ಪೇಡ ಅಲ್ಲ; ಬೇಕರಿಯಲ್ಲಿ ಸಿಹಿತಿಂಡಿ ಕಟ್ಟಿಕೊಡಲು ಪೊಟ್ಟಣ ಇರಲಿಲ್ಲ, ಹಾಗಾಗಿ ಧಾರವಾಡ ಪೇಡ ಬಾಕ್ಸ್‌ನಲ್ಲೇ ಹಾಕಿಕೊಟ್ಟ' ಎನ್ನುತ್ತಾನೆ. ಆದರೆ ಆ ಪೊಟ್ಟಣದ ಕವರ್‌ನಲ್ಲಿ 'ನಂದಿನಿ ಪೇಡಾ' ಎಂದು ಬರೆದಿದ್ದು ಅದು ನಂದಿನಿ ಪೇಡಾದ ಪೊಟ್ಟಣವೇ ಆಗಿತ್ತು. ನಿರ್ದೇಶಕರು ಇಂತಹ ಸೂಕ್ಷ್ಮಗಳನ್ನು ಗಮನಿಸಿ ಸರಿಪಡಿಸಿಕೊಂಡರೆ ಧಾರಾವಾಹಿ ಮತ್ತಷ್ಟು ಕಳೆಗಟ್ಟಿ ಜನಪ್ರಿಯವಾಗಬಹುದು.

–ಗೌರೀಶ್ ಹೆಗಡೆ ಬೆಂಗಳೂರು

## ರಂಜಿಸುವ 'ಪಾಪ ಪಾಂಡು'

ಇತ್ತೀಚಿನ ದಿನಗಳಲ್ಲಿ ಮೂಡಿಬರುತ್ತಿರುವ ಹಾಸ್ಯ ಕಾರ್ಯಕ್ರಮಗಳು ಯಾರನ್ನು ರಂಜಿಸುತ್ತಿವೆಯೋ ಗೊತ್ತಾಗುತ್ತಿಲ್ಲ. ಅಶ್ಲೀಲ ಸಂಭಾಷಣೆ, ಗಂಡಸರು ಹೆಂಗಸರಂತೆ ಪೋಷಾಕು ಧರಿಸಿ ಹಾವಭಾವ ಪ್ರದರ್ಶನ ಮಾಡುವುದು ಹಾಸ್ಯವೇ? ಈ ನಿಟ್ಟಿನಲ್ಲಿ ಮುಗ್ಧ ಹಾಸ್ಯವನ್ನು ಉಣಬಡಿಸುತ್ತಿರುವ ಚಂದ್ರು ಅವರ 'ಪಾಪ ಪಾಂಡು' ಧಾರಾವಾಹಿ ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಅನುಭವಿ ಕಲಾವಿದರಾದ ಶಾಲಿನಿ ಮತ್ತು ಚಿದಾನಂದ ಅಲ್ಲದೆ ಹೊಸ ಯುವ ಕಲಾವಿದರೂ ಈ ಧಾರಾವಾಹಿಯಲ್ಲಿ ಜನರಿಗೆ ಮನರಂಜನೆ ನೀಡುವುದರಲ್ಲಿ ಗಮನೀಯ ಪ್ರಯತ್ನ ಮಾಡಿದ್ದಾರೆ. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಮೂಡಿಬರಲೆಂದು ನಮ್ಮ ಆಶಯ.

– ವಿಶಾಲಾಕ್ಷಿ ಗುರುಪ್ರಸಾದ್, ಬೆಂಗಳೂರು

## ವಾರದ ಪತ್ರ — ಕನ್ನಡ ಕರಗುತ್ತಿದೆ.....

ಇತ್ತೀಚೆಗೆ ಚಂದನ ವಾಹಿನಿಯ ಮುಂಜಾವಿನ ಕಾರ್ಯಕ್ರಮವಾದ 'ಶುಭೋದಯ ಕರ್ನಾಟಕ'ದಲ್ಲಿ ನಾಡಿನ ಅಚ್ಚುಮೆಚ್ಚಿನ ಕಲಾವಿದ, ಚಲನಚಿತ್ರ ನಟರಾದ ರಾಮಕೃಷ್ಣ ಅವರು ತಮ್ಮ ಅನುಭವಗಳನ್ನು ಮೆಲುಕು ಹಾಕುತ್ತ, ಬದಲಾದ ಬೆಂಗಳೂರು ನಗರವನ್ನು ನೆನೆದರು. 'ಬೆಂಗಳೂರು ಹಿಂದಿದ್ದ ಹಾಗಿಲ್ಲ. ಎಲ್ಲವೂ ಬದಲಾಗಿ ಬಿಟ್ಟಿದೆ. ಭಾಷೆಯೂ ಸಹ. ನಗರ ಬೆಳೆಯುತ್ತಿದೆ... ದುರದೃಷ್ಟವಶಾತ್ ಕನ್ನಡ ಕರಗುತ್ತಿದೆ' ಎಂದು ಭಾವನಾತ್ಮಕವಾಗಿ ಹೇಳಿದ ಮಾತುಗಳು ಅರ್ಥಪೂರ್ಣವಾಗಿವೆ. ಈ ಚಿಕ್ಕ ವಾಕ್ಯದ ಹಿಂದಿನ ಪ್ರಾಮುಖ್ಯತೆಯನ್ನು ಮೂಲ ಕನ್ನಡಿಗರು ಮನಗಂಡರೆ ಮಾತ್ರ ಕರ್ನಾಟಕದ ಉಳಿವು ಸಾಧ್ಯವಾದೀತು.

–ನಳಿನಿ ಆರ್. ಮಾಗಲ್, ಸಕಲೇಶಪುರ

## ಒಟ್ಟು ಕುಟುಂಬ ಹೀಗಿರುತ್ತದೆಯೇ?

ಮನೆಯೇ ಮಂತ್ರಾಲಯ ಧಾರಾವಾಹಿಯಲ್ಲಿ ಬರುವ ಕಿರುಮಣಿ ಕುಟುಂಬದವರಿಗೆ ಯಾರಿಗೂ ಯಾವ ಕೆಲಸವೂ ಇಲ್ಲವೇ? ಮಕ್ಕಳು, ವಯಸ್ಕರು, (ಅಳಿಯಂದಿರು, ಗಂಡು ಮಕ್ಕಳು, ಮೊಮ್ಮಕ್ಕಳು) ಯಾರೂ ಶಾಲೆಗಳಿಗಾಗಲಿ, ಕೆಲಸಗಳಿಗಾಗಲಿ ಹೋಗಿದ್ದೇ ಇಲ್ಲ. ಎಲ್ಲರೂ ಯಾವಾಗಂದ್ರೆ ಆವಾಗ ನಡು ಮನೇಲಿ ಸೇರುತ್ತಾರೆ. ಇದು ಒಟ್ಟು ಕುಟುಂಬ ಅಂತ ತೋರಿಸಲೋಸ್ಕರವೇ ಹೇಗೆ? ದೊಡ್ಡವರ ಮಾತಿನ ಮಧ್ಯೆ ಮಕ್ಕಳೂ ಸೇರುತ್ತಾರೆ. ಇದು ಯಾವ ಕುಟುಂಬದಲ್ಲಿದೆ ಗೊತ್ತಿಲ್ಲ.

–ಕೆ. ಗಾಯತ್ರಿ, ಮೈಸೂರು

## ಖುಷಿ ತಂದ ಧಾರಾವಾಹಿ

ರಾತ್ರಿ 9.30 ಗಂಟೆಗೆ ಪ್ರಸಾರವಾಗುವ 'ಮಗಳು ಜಾನಕಿ' ಧಾರಾವಾಹಿ ಚೆನ್ನಾಗಿದೆ. ಟಿ.ಎನ್.ಸೀತಾರಾಂ ಒಂದು ಹೆಣ್ಣಿನ ಕಥೆ ತೋರಿಸುತ್ತ ಹೋಗುತ್ತಾರೆ. ಒಬ್ಬ ಹೆಣ್ಣುಮಗಳು ಒಬ್ಬನನ್ನು ಪ್ರೀತಿಸಿ ಅವನನ್ನು ಬಿಟ್ಟು ಬೇರೆಯವರ ಜೊತೆ ಮದುವೆಯಾಗುವುದೆಂದರೆ ಎಷ್ಟು ಕಷ್ಟ, ಅವಳ ಮನಸ್ಥಿತಿ ಹೇಗೆ ಇರುತ್ತದೆ, ತಂದೆಯಾದವನು ಏನೇನು ಕುತಂತ್ರ ಮಾಡುತ್ತಾನೆ... ಇದನ್ನೆಲ್ಲಾ ಚೆನ್ನಾಗಿ ನಿರೂಪಿಸಿದ್ದಾರೆ. ಕತೆ ಕುತೂಹಲಕರವಾಗಿದೆ. ಎಲ್ಲರೂ ನೋಡುವಂತಹ ಧಾರಾವಾಹಿ.

–ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ; ಎಸ್.ವಿಜಯಕುಮಾರಿ; ಆರ್.ಎನ್. ಲಕ್ಷ್ಮೀಕಾಂತ್, ಬೆಂಗಳೂರು

## 'ಶುಭೋದಯ'ದಿಂದ ಮಾರ್ಗದರ್ಶನ

ಕಳೆದ ವಾರ ಚಂದನ ವಾಹಿನಿಯಲ್ಲಿ ನಿರ್ದೇಶಕ ಪಿ.ಆರ್. ಶೇಷಾದ್ರಿಯ ಸಂದರ್ಶನದೊಂದಿಗೆ ಪ್ರಾರಂಭವಾದ 'ಶುಭೋದಯ' ತುಂಬಾ ಚೆನ್ನಾಗಿತ್ತು. ಶೇಷಾದ್ರಿಯವರು ತಮ್ಮ ಬಾಲ್ಯ ಮತ್ತು ತಮ್ಮ ಜೀವನದ ಅನೇಕ ಮೌಲ್ಯಗಳ ಬಗ್ಗೆ ಸಂದರ್ಶನದಲ್ಲಿ ಮಾತನಾಡಿದರು. ಮೌಲ್ಯಗಳಿಂದ ತಮ್ಮ ಜೀವನದಲ್ಲಿ ಆದ ಅಗಾಧ ಬದಲಾವಣೆಗಳನ್ನು ಮತ್ತು ಅವರ ವಿವಿಧಾನುಭವಗಳನ್ನು ಹೇಳಿದ ಪರಿ ಎಲ್ಲರಿಗೂ ಮಾರ್ಗದರ್ಶನದಂತಿತ್ತು.

ಬೆಳಗಿನ ಈ ಶುಭೋದಯ ಚೆನ್ನಾಗಿದ್ದು ಅನೇಕ ಮಹನೀಯರನ್ನು ಪರಿಚಯಿಸುವುದರೊಂದಿಗೆ ಎಲ್ಲರಿಗೂ ಮಾರ್ಗದರ್ಶನ್ನು ನೀಡುತ್ತಿದೆ.

–ಮೇಘನಾ ಜಹಗೀರದಾರ, ಧಾರವಾಡ

## ಸೆಲೆಬ್ರಿಟಿಗಳು ಏಕೆ?

ಉತ್ತಮ ವಿಷಯಗಳ ಪ್ರಶ್ನೆಗಳು, ಜತೆಗೆ ಬುದ್ಧಿಗೊಂದು ಕಸರತ್ತು ನೀಡುವ 'ಕೋಟ್ಯಧಿಪತಿ' ನಿಜಕ್ಕೂ ಉತ್ತಮ ಕಾರ್ಯಕ್ರಮ. ಈ ಕಾರ್ಯಕ್ರಮ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರವೇ ಆಗಿರುವುದರಿಂದ ವಾಮ ಮಾರ್ಗದಲ್ಲಿ ನುಸುಳಲು ಸಾಧ್ಯವಿಲ್ಲವೆಂದು ಎಲ್ಲರಿಗೂ ತಿಳಿದ ವಿಚಾರ. ಆದರೂ ಈ ಮಧ್ಯೆ ಸಿನಿಮಾ ತಾರೆಗಳು ನುಸುಳುತ್ತಿದ್ದಾರೆ. ಇಷ್ಟಲ್ಲದೆ ಇಲ್ಲಿ ಇವರನ್ನು ವಿಶೇಷವೆಂಬಂತೆ ಬಿಂಬಿಸಲಾಗುತ್ತಿದೆ. ಇವರನ್ನು ಕರೆಸಿ ಅತಿಯಾಗಿ ಬಿಂಬಿಸ ಹೊರಟಿರುವುದು ಎಷ್ಟು ಸರಿ?

–ಶಂಕರೇಗೌಡ ತುಂಬಕೆರೆ, ಮಂಡ್ಯ

## ಗ್ರಾಮೀಣ ಪ್ರತಿಭೆಗೆ ಅವಕಾಶ

ಟಿವಿ ವಾಹಿನಿಗಳಲ್ಲಿ ಉಳ್ಳವರಿಗೆ, ಪ್ರಭಾವಶಾಲಿಗಳಿಗೆ, ಸರಿಯಾದ ಸಂಬಂಧ ಹೊಂದಿದವರಿಗೆ ಮತ್ತು ಸೆಲೆಬ್ರೆಟಿಗಳಿಗೆ ಮಾತ್ರ ಅವಕಾಶ ದೊರಕುತ್ತದೆ ಎನ್ನುವ ಆರೋಪ ಲಾಗಾಯ್ತಿನಿಂದ ಇದೆ. ಇದಕ್ಕೆ ವ್ಯತಿರಿಕ್ತವಾಗಿ, ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿ ಹರಿದಾಡುತ್ತಿದ್ದ ಅತಿ ಹಿಂದುಳಿದ ಕೊಪ್ಪಳದ ಹಳ್ಳಿಯ, ಎಸ್.ಜಾನಕಿಯಂತೆ ಹಾಡುವ ಗಾನಕೋಗಿಲೆ ಗಂಗಮ್ಮನವರ ಸುಶ್ರಾವ್ಯ ಗಾನಸುಧೆಯ ಜಾಡನ್ನು ಹಿಡಿದು ನ್ಯೂಸ್ 18 ಕನ್ನಡ ಚಾನೆಲ್ ಅವರ ಸಂದರ್ಶನ ಮತ್ತು ಕಾರ್ಯಕ್ರಮ ನೀಡಿದ್ದು ಶ್ಲಾಘನೀಯ. ಅವಕಾಶಗಳಿಲ್ಲದೇ ಪ್ರತಿಭೆಯನ್ನು ಹೊರಹಾಕಲಾದ ಗ್ರಾಮೀಣ ಪ್ರತಿಭೆಗಳಿಗೆ ಕೆಲವು ವಾಹಿನಿಗಳು ಆಶಾಕಿರಣಗಳಾಗುತ್ತಿರುವುದು ಟಿವಿ ಲೋಕದಲ್ಲಿ ಒಂದು ಸ್ವಾಗತಾರ್ಹ ಬೆಳವಣಿಗೆ.

–ರಮಾನಂದ ಶರ್ಮಾ, ನವದೆಹಲಿ